ಕುಂದಾಪುರ ಸರ್ಕಲಿನಲ್ಲಿ ಮಟ್ಕಾ ಹಾವಳಿ

321 - ಶ್ರೀ ಕೆ. ಪ್ರಕಾಶ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕುಂದಾಪುರ ಸರ್ಕಲಿನಲ್ಲಿ ಮಟ್ಕಾ ಹಾವಳಿ ಬಗ್ಗೆ ಬಹಳಷ್ಟು ದೂರುಗಳು ಬಂದಿರುವುದು ನಿಜವೆ; ಬಂದರೂ ಸಹ ಕ್ರಮ ಕೈಗೊಳ್ಳದಿರಲು ಕಾರಣವೇನು?*

ಆ) *ಗುಪ್ತ ವರದಿ ಆಧಾರದ ಮೇಲೆ ಪೋಲೀಸರು ಹಫ್ತಾವನ್ನು ಪಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?*

ಇ) *ಇಂತಹ ಮಟ್ಕಾವನ್ನು ಕಟ್ಟುನಿಟ್ಟಾಗಿ ನಿಲ್ಲಿಸಲು ಸಂಬಂಧಪಟ್ಟ ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರ್‌ರನ್ನು ಜವಾಬ್ದಾರಿಯನ್ನಾಗಿ ಮಾಡಲು ಸರ್ಕಾರವು ಪರಿಶೀಲಿಸುವರೇ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಹೌದು. ಈ ಮಟ್ಕಾ ಹಾವಳಿಯ ಸುಳಿವು ದೊರೆತ ತಕ್ಷಣವೇ ಆ ಸ್ಥಳಗಳ ಮೇಲೆ ಅನಿರೀಕ್ಷಿತ ದಾಳಿಯನ್ನು ಮಾಡಲಾಗುತ್ತಿದೆ.

ಆ) ಇಲ್ಲ

ಇ) ಮಟ್ಕಾ ಜೂಜಾಟವನ್ನು ತಡೆಗಟ್ಟುವಂತೆ ಎಲ್ಲಾ ಪೋಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ಹಾವಳಿಯನ್ನು ತಡೆಗಟ್ಟಲು ವಿಫಲರಾದ ಸಂಬಂಧಪಟ್ಟ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್‌ಗಳನ್ನು ಜವಾಬ್ದಾರರನ್ನಾಗಿ ಮಾಡಲಾಗಿದೆ ಮತ್ತು ಅವರುಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಅಬಕಾರಿ ಕಾಯ್ದೆ 5ರ ಅಡಿ ಮದ್ಯದ ಅಂಗಡಿ ಮತ್ತು ಬಾರ್ ಸ್ಥಳಾಂತರ

564 - ಶ್ರೀ ರಮಾನಾಥ ರೈ (ಬಂಟ್ವಾಳ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ಅಬಕಾರಿ ಕಾಯ್ದೆ 5ರ ಅಡಿಯಲ್ಲಿ ಎಷ್ಟು ಮದ್ಯದ ಅಂಗಡಿ ಹಾಗೂ ಬಾರ್‌ಗಳನ್ನು ಸ್ಥಳಾಂತರಿಸಲಾಗಿದೆ?*

ಆ) *ಈ ಕಾನೂನು ತಿದ್ದುಪಡಿ ಮಾಡುವ ವಿಷಯ ಸರ್ಕಾರದವರ ಮುಂದಿದೆಯೇ?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಸ್ಥಳಾಂತರಿಸಿದ ಮದ್ಯದ ಅಂಗಡಿ ಮತ್ತು ಬಾರ್‌ಗಳ ಸಂಖ್ಯೆ 219.

ಆ) ಇಲ್ಲ

ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಮಾಲತಿ ನದಿಗೆ ಅಣೆಕಟ್ಟು

106 - ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಮಾಲತಿ ನದಿಗೆ ಅಣೆಕಟ್ಟು ಕಟ್ಟುವ ಕಾಮಗಾರಿಯು ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಸೇರಿದೆಯೇ?*

ಆ) *ಹಾಗೂ ಸದರಿ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಸಾಗುವಳಿ ಜಮೀನೆಷ್ಟು? (ತರಿ ಬಾಗಾಯ್ತು, ಖುಷ್ಕಿ, ವಿವರ ಒದಗಿಸುವುದು.)*

ಇ) *ಮುಳುಗಡೆ ಆಗುವ ಮನೆಗಳೆಷ್ಟು ಹಾಗೂ ಅರಣ್ಯ ಪ್ರದೇಶವೆಷ್ಟು?*

ಈ) *ಈ ಬಗ್ಗೆ ಇದುವರೆಗೂ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :